ಗದಗ್ ತಾಲ್ಲೂಕಿನ ಹೊಸಹಳ್ಳಿಯ ಬುದ್ದಿಸ್ವಾಮಿ ಮಠದ ಆಸ್ತಿ ಪಾಸ್ತಿ.

೭. ಶ್ರೀ ಕೆ. ಹೆಚ್. ಪಾಟೀಲ್ (ಗದಗ್).—ಮಾನ್ಯ ಕಂದಾಯ ಹಾಗೂ ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ಧಾರವಾಡ ಜಿಲ್ಲೆ, ಗದಗ ತಾಲ್ಲೂಕಿನ ಹೊಸಹಳ್ಳಿ ಗ್ರಾಮದ ಶ್ರೀ ಬುದ್ದಿಸ್ವಾಮಿ ಮಠವು ಬಾಂಬೆ ಪಬ್ಲಿಕ್ ಟ್ರಸ್ಟ್ ಆಕ್ಟ್‌ನ ಅಧೀನಕೊಳಪಟ್ಟಿದ್ದು, ಈ ಮಠದ ಈಗಿನ ಸ್ವಾಮಿಯು ಮಠದ ಆಸ್ತಿಯನ್ನು ನಿಯಮವನ್ನು ಉಲ್ಲಂಘಿಸಿ ವಿಲೇವಾರಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಬಂದಿದ್ದಲ್ಲಿ, ಸರ್ಕಾರವು ಈ ಮಠದ ಆಸ್ತಿ ರಕ್ಷಣೆಗೆ ಏನು ಕ್ರಮ ತೆಗೆದುಕೊಂಡಿದೆ ?

ಇ) ಕಾನೂನು ಉಲ್ಲಂಘನೆ ಮಾಡುತ್ತಿರುವ ಟ್ರಸ್ಟ್ (ಈಗಿನ ಸ್ವಾಮಿ) ಮೇಲೆ ಏನಂ ಕ್ರಮ ತೆಗೆದುಕೊಳ್ಳಲಾಗುವುದು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮಂತ್ರಿಯವರು).—

ಅ) ಈ ಬಗ್ಗೆ ದೂರು ಅರ್ಜಿ ಬಂದಿದೆ.

ಆ) ಈ ವಿಷಯವನ್ನು ಅಸಿಸ್ಟೆಂಟ್ ಚಾರಿಟಿ ಕಮೀಷನರ್‌ಕವರು ಬಾಂಬೆ ಪಬ್ಲಿಕ್ ಟ್ರಸ್ಟ್ ೧೯೫೦ ನಿಯಮದಡಿ ತನಿಖೆ ಮಾಡುತ್ತಿದ್ದಾರೆ.

ಇ) ಈ ಹಂತದಲ್ಲಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಕೆ. ಹೆಚ್. ಪಾಟೀಲ್.—ಎನ್‌ಕ್ವೈರಿ ನಡೆದಿದೆ ಎಂದು ಹೇಳಿದ್ದೀರಿ. ನಾನು ಹೇಳುತ್ತೇನೆ ಈಗಾಗಲೇ ಅಲ್ಲಿ ಎನ್‌ಕ್ವೈರಿ ಮುಗಿದು ಹೋಗಿದೆ. ಅಲ್ಲಿಯ ಪ್ರಾಪರ್ಟಿಯನ್ನು ಟ್ರಾನ್ಸ್‌ಫರ್ ಮಾಡಿದ್ದಾರೆ. ಭಕ್ತರು ಇರತಕ್ಕಂಥ ಈ ಒಂದು ಮಠ. ಹಿಸ್ಟಾರಿಕಲ್ ಡೆವಲಪ್‌ಮೆಂಟ್ ಸಲುವಾಗಿ ಅವರು ಈ ಒಂದು ಟ್ರಸ್ಟಿಯನ್ನು ನೇಮಕ ಮಾಡಿದ್ದಾರೆ. ಈಗ ಈ ಮಠದ ಆಸ್ತಿಯನ್ನು ವಿಲೇವಾರಿ ಮಾಡುತ್ತಿದ್ದಾರೆ. ಇದನ್ನು ತಡೆಗಟ್ಟಬೇಕೆಂದು ಹೇಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ಮಠದವರು ಚಾರಿಟಿ ಕಮಿಷನರ್‌ರವರ ಅಪ್ಪಣೆ ಇಲ್ಲದೆ ಆಸ್ತಿಯನ್ನು ವಿಲೇವಾರಿ ಮಾಡುವುದಕ್ಕೆ ಬರುವುದಿಲ್ಲ. ಆ ರೀತಿ ಅವರು ಏನಾದರೂ ಮಾಡಿದ್ದರೆ ಅದು ಕಾನೂನು ಬಾಹಿರವಾಗುತ್ತದೆ. ಈಗ ಮಾನ್ಯ ಸದಸ್ಯರು ಅಲ್ಲಿ ಎನ್‌ಕ್ವೈರಿ ಮುಗಿದು ಹೋಯಿತು ಎಂದು ಹೇಳಿದ್ದಾರೆ ಆ ರೀತಿ ಏನಾದರೂ ತಮ್ಮ ಹತ್ತಿರ ಮಾಹಿತಿ ಇದ್ದರೆ ಕೊಡಿ. ಮುಂದಿನ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಕೆ. ಹೆಚ್. ಪಾಟೀಲ್.—ಬಹಳ ಸಂತೋಷ. ಆದರೆ ಇನ್ನೂ ಒಂದು ಮಾತನ್ನು ಹೇಳುತ್ತೇನೆ. ಒಂದು ವೇಳೆ ಆಸ್ತಿ ವಿಲೇವಾರಿ ಕ್ಯಾನ್ಸಲ್ ಆಗಿದ್ದರೂ ಸಹಾ ಆಲ್ಲಿರುವ ಬಂಗಾರ ವಿಲೇವಾರಿ ಆಗಿರುತ್ತದೆ. ಅದು ಹೋದರೆ ಮತ್ತೆ ಬರುವುದಿಲ್ಲ. ಹೊಲ ಮನೆ ಬರುತ್ತದೆ. ಜಂಗಮ್ ಮೇಲ್ ಹೋಗುತ್ತದೆ. ಆದ್ದರಿಂದ ತಾವು ಇದರ ಬಗ್ಗೆ ತೀವ್ರವಾಗಿ ಚಾರಿಟಿ ಕಮಿಷನರ್‌ಗೆ ಟೆಲಿಗ್ರಾಫಿಕಲಿ ಇನ್ಸ್‌ಟ್ರಕ್ಷನ್ಸ್ ಕೊಡುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ,—ಅಂಡರ್ ದಿ ಬಾಂಬೆ ಟ್ರಸ್ಟ್ ಆಕ್ಟ್ ಪ್ರಕಾರ ನಾವು ನೇರವಾಗಿ ಚಾರಿಟಿ ಕಮಿಷನರ್‌ರವರಿಗೆ ಇನ್ಸ್‌ಟ್ರಕ್ಷನ್ ಕೊಡುವುದಕ್ಕೆ ಬರುವುದಿಲ್ಲ. ಮೂವಬಲ್ ಪ್ರಾಪರ್ಟೀಸ್ ರಿಜಿಸ್ಟರ್ ಆಗಿರುವುದರಿಂದ ಅವೆಲ್ಲಾ ಆ ಎಲ್ಲಾ ಆಸ್ತಿಯ ವಿವರಗಳು ಅದರಲ್ಲಿರುತ್ತದೆ. ನೀವು ಹೇಳಿದ ಹಾಗೆ ಆಮೇಲೆ ನಾವು ಯಾವ ಅಧಿಕಾರಿಗಳನ್ನು ಅಲ್ಲಿಗೆ ನೇಮಿಸಬೇಕು ಎನ್ನುವುದನ್ನು ಆಲೋಚಿಸಿ ಮಾಡಬೇಕಾಗುತ್ತದೆ.

ಶ್ರೀ ಎಂ. ಎಸ್. ಪಾಟೀಲ್.—ನಾನು ಶಿರಸಂಗಿ ಟ್ರಸ್ಟ್ ಬಗ್ಗೆ ಒಂದು ಕಾಲಿಂಗ್ ಅಟೆನ್ಷನ್ ಕೊಟ್ಟಿದ್ದೆ. ಅದು ಶಿಕ್ಷಣ ಇಲಾಖೆಯದು. ಅದು ರೆವಿನ್ಯೂ ಇಲಾಖೆಗೆ ಹೋಗಿದೆ. ಆದರ ಬಗ್ಗೆ ನನಗೆ ಇದುವರೆಗೂ ಉತ್ತರ ಬಂದಿಲ್ಲ. ಈ ಪ್ರಶ್ನೆಗೆ ಉತ್ತರವನ್ನು ಮುಂದಿನ ಶುಕ್ರವಾರ ತೆಗೆದುಕೊಳ್ಳುವಂತೆ ಮಾಡುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಮುಂದಿನ ಶುಕ್ರವಾರದ ಹೊತ್ತಿಗೆ ಉತ್ತರವನ್ನು ತರಿಸಿ ಕೊಡುತ್ತೇನೆ.